936(1031) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮತ್ಸ್ಯಾಶ್ರಯ ಯೋಜನೆಯಲ್ಲಿ ಮನೆ ಮಂಜೂರಾತಿ ಕೋರಿ ಉಡುಪಿ ಜಿಲ್ಲೆಯಿಂದ ಎಷ್ಟು ಅರ್ಜಿಗಳು ಬಂದಿವೆ (ಕ್ಷೇತ್ರವಾರು ವಿವರ ನೀಡುವುದು) :

ಆ) ಹಲವಾರು ವರ್ಷಗಳಿಂದ ಮನೆ ಮಂಜೂರಾತಿ ಕೋರಿ ನಿರೀಕ್ಷೆಯಲ್ಲಿರುವ ಮೀನುಗಾರರಿಗೆ ಈ ವರ್ಷದಲ್ಲಿ ಮನೆ ಮಂಜೂರು ಮಾಡಲಾಗುವುದೇ :

ಇ) ಮೀನುಗಾರರಿಗೆ ಮನೆಗಳನ್ನು ನಿರ್ಮಿಸಲು ನೀಡುವ ಈಗಿನ ಮೊತ್ತ 30,000–00 ರಿಂದ 50,000–00 ಕ್ಕೆ ಹೆಚ್ಚಿಸಲಾಗುವುದೇ ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಮತ್ಸ್ಯಾಶ್ರಯ ಯೋಜನೆಯಲ್ಲಿ ಮನೆ ಮಂಜೂರಾತಿ ಕೋರಿ ಉಡುಪಿ ಜಿಲ್ಲೆಯಿಂದ 3668 ಅರ್ಜಿಗಳು ಬಂದಿರುತ್ತವೆ. ಕ್ಷೇತ್ರವಾರು ವಿವರಗಳು ಕೆಳಗಿನಂತಿರುತ್ತದೆ.

1	ಕಾಪು	302 ಅರ್ಜಿಗಳು
2	ಉಡುಪಿ	379 ಅರ್ಜಿಗಳು
3	ಬ್ರಹ್ಮಾವರ	990 ಅರ್ಜಿಗಳು
4	ಕುಂದಾಪುರ	908 ಅರ್ಜಿಗಳು
5	ಬೈಂದೂರು	1009 ಅರ್ಜಿಗಳು
6	ಕಾರ್ಕಳ	80 ಅರ್ಜಿಗಳು

ಆ) ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಯಾವುದೇ ಮನೆಗಳನ್ನು ಮಂಜೂರು ಮಾಡುವ ಯೋಜನೆ ಇರುವುದಿಲ್ಲ. ಆದರೆ ಮತ್ಸ್ಯಾಶ್ರಯ ಎರಡನೇ ಹಂತದ ಯೋಜನೆಯಲ್ಲಿ 2001–02, 2002–03 ಮತ್ತು 2003–04ನೇ ಸಾಲಿನಲ್ಲಿ ಒಟ್ಟು 523 ಮನೆಗಳನ್ನು ಉಡುಪಿ ಜಿಲ್ಲೆಗೆ ಮಂಜೂರು ಮಾಡಲಾಗಿದೆ.

ಇ) ಮನೆ ನಿರ್ಮಾಣ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಇರುವುದಿಲ್ಲ.

937(1032) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ವರ್ಷ ಸಮುದ್ರ ಕೊರೆತ ಉಂಟಾಗಿ, ಸಮುದ್ರ ತೀರದಲ್ಲಿ ವಾಸಿಸುವ ಮೀನುಗಾರರ ಹಾಗೂ ಇತರೆ ವರ್ಗದವರ ಮನೆ ಆಸ್ತಿಪಾಸ್ತಿ ಮೀನುಗಾರಿಕಾ ರಸ್ತೆಗಳಿಗೆ ಅಪಾರ ಹಾನಿ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಲ್ಲಿ ಸಮುದ್ರ ಕೊರೆತ ತಡೆಗಟ್ಟಲು ಶಾಶ್ವತ ಯೋಜನೆ ರೂಪಿಸಿದೆಯೇ?

ಇ) ರೂಪಿಸಿದಲ್ಲಿ ಯಾವ ಹಂತದಲ್ಲಿದೆ?

ಈ) ಕಾಮಗಾರಿಗಳನ್ನು ಯಾವಾಗ ಕೈಗೊಳ್ಳಲಾಗುವುದು?

ಉ) ಉಡುಪಿ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಸಮುದ್ರ ತಡೆಗೋಡೆ ನಿರ್ಮಿಸಲು ಉದ್ದೇಶಿಸಿದ ಪ್ರದೇಶಗಳು ಯಾವುವು (ವಿಧಾನ ಸಭಾವಾರು ವಿವರ ಒದಗಿಸುವುದು) ?

ಊ) ಹಲವಾರು ಕಾರಣಗಳಿಂದ ಯೋಜನೆಗಳು ವಿಳಂಬವಾಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವುದೇ ?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು

ಆ) ಹೌದು

ಇ) 1. ಕೇಂದ್ರ ಪುರಸ್ಕೃತ ಯೋಜನೆಯಡಿ ರೂ. 3.21 ಕೋಟಿ ಅಂದಾಜು ವೆಚ್ಚದಲ್ಲಿ ಕುಂದಾಪುರ ಪಡುವರಿ ಬಳಿ ಶೀಘ್ರದಲ್ಲಿಯೇ ಶಾಶ್ವತ ಸಮುದ್ರ ತಡೆಗೋಡೆ ನಿರ್ಮಿಸುವ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ.

2. ರೂ. 135.95 ಕೋಟಿ ಅಂದಾಜು ವೆಚ್ಚದಲ್ಲಿ ಕರಾವಳಿಯ ಸುಮಾರು 48.875 ಕಿ.ಮೀ. ಉದ್ದಕ್ಕೂ ಶಾಶ್ವತ ತಡೆಗೋಡೆ ನಿರ್ಮಿಸುವ ಯೋಜನೆಯು ಕೇಂದ್ರ ಸರ್ಕಾರದ ಪರಿಶೀಲನೆ ಹಂತದಲ್ಲಿದೆ.

ಈ) ಕೇಂದ್ರ ಸರ್ಕಾರದ ಅನುಮತಿ ದೊರಕಿದ ನಂತರ ಸಂಪನ್ಮೂಲದ ಲಭ್ಯತೆಯ ಮೇಲೆ ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದು.

ಉ) ಉಡುಪಿ ಜಿಲ್ಲೆಯಲ್ಲಿ ರಾಷ್ಟ್ರೀಯ ಕರಾವಳಿ ಸಂರಕ್ಷಣಾ ಯೋಜನೆ (National Coastal Protection Project) ಹಾಗೂ ಇತರೆ ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಿರುವ ಶಾಶ್ವತ ತಡೆಗೋಡೆ ಕಾಮಗಾರಿಗಳ ವಿವರ :

1. ಕಾಪು ಕ್ಷೇತ್ರದ ಹೆಜಮಾಡಿ, ಕಡಿಪಟ್ಣ, ತೆಂಕ ಎರ್ಮಾಳ, ಬಡ ಎರ್ಮಾಳ, ಉಚ್ಚಿಲ, ಮೂಳೂರು, ಪೊಲಿಪು ಪಡು ಉಳಿಯರಗೋಳಿ ಪಡುಕೆರೆ

2. ಉಡುಪಿ ಕ್ಷೇತ್ರದ ಉಳಿಯರಗೋಳಿ ಪಡುಕೆರೆ

3. ಬ್ರಹ್ಮಾವರ ಕ್ಷೇತ್ರದ ಹೊಡೆ ಕೆಮ್ಮಣ್ಣು, ಕೋಡಿ ಬೆಂಗ್ರೆ, ಹೊಸ ಬೆಂಗ್ರೆ ಕೋಡಿ ಕನ್ಯಾವ, ಪರಂಪಳ್ಳಿ ಪಡುಕೆರೆ, ಕೊಟಪಟ್ಟು, ಮಣೂರು ಪಡುಕೆರೆ

4. ಕುಂದಾಪುರ ಕ್ಷೇತ್ರದ ಬಿಜಾಡಿ, ಕಸಬಾ ಕೋಡಿ

5. ಬೈಂದೂರು ಕ್ಷೇತ್ರದ ಮರವಂತೆ, ನಾವುಂದಾ ಆದ್ರಗೋಳಿ, ಹೊಸ ಹಿತ್ಲು, ಗಂಗೆ ಬೈಲು, ಉಪ್ಪುಂದ ಅಮ್ಮನವರ ತೊಟ್ಟಿಲು, ಆಳ್ವೆಕೋಡಿ ಕಳಿಹಿತ್ಲು ಮತ್ತು ಪಡುವರಿ.

ಊ) ಹೌದು.

943(1281) ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಕೇಂದ್ರ ಸ್ಥಾನದಿಂದ 20 ಕಿ.ಮೀ.ವರೆಗೆ ಖಾಸಗೀ ಬಸ್‌ನವರಿಗೆ ಬಸ್ ಓಡಿಸಲು ಅವಕಾಶ ನೀಡುವ ಅಧಿಸೂಚನೆಯನ್ನು ಸರ್ಕಾರ ಹೊರಡಿಸಿದೆಯೇ ?